







ಗಗನಚುಂಬಿ ಮರಗಳ ನಡುವಿನಿಂದ ಹಣಿಕುತ್ತಿರುವ ಸೂರ್ಯ

ಇಲ್ಲಿನ ಗುಡಿ ಮತ್ತು ಬಸದಿಗಳ ವಾಸ್ತುವಿನ್ಯಾಸವು ಬಿದ್ದ ಮಳೆನೀರು ಕೂಡಲೇ ಹರಿದು ಹೋಗುವಂತೆ ಹಾಸುಗಲ್ಲುಗಳನ್ನು ಹೆಂಚಿನಂತೆ ಹೊಚ್ಚಿದ ಛಾವಣಿಗಳಿಂದ ಕೂಡಿದೆ. ಇದೊಂದು ವಾಸ್ತುಶಿಲ್ಪದ ಅಚ್ಚರಿ. ಆದರೆ ನಿಧಿಗಳ್ಳರು ಪ್ರಾಚೀನಗುಡಿಯನ್ನು ಅಗೆದು ಹಾಕಿದ್ದಾರೆ. ಮೆಣಸು ಸಾಗಿಸುತ್ತಿದ್ದ ಕುದುರೆಹಾದಿ ಅಳಿಸಿಹೋಗಿದೆ. ಭೀಕರವಾಗಿ ಗರ್ಜಿಸುತ್ತಿರುವ ಗುಡಿಯ ಮುಂದಣ ಶರಭಶಿಲ್ಪಗಳ ಮೇಲೆ ಹುಲ್ಲುಕಳೆಗಿಡ ಬೆಳೆದು ಅವು ಅನಾಥವಾಗಿವೆ. ಕೋಟೆಗಳ ಬಿರುಕಿನೊಳಗೆ ದೊಡ್ಡ ಮರಗಳು ಬೆಳೆದು, ಚರಿತ್ರೆಯ ಭಿತ್ತಿಯ ಮೇಲೆ ನಿಸರ್ಗ ಬರೆದ ವರ್ತಮಾನದ ದುರಂತನಾಟಕದಂತೆ ತೋರುತ್ತವೆ. ತನ್ನ ಸಹಜ ಸ್ವತಂತ್ರ ಲಯವನ್ನು ಮುರಿದು ಕಟ್ಟಿದ ನಾಗರಿಕತೆಗಳ ಮೇಲೆ ನಿಸರ್ಗವು ತಿರುಗಿಬಿದ್ದು ಸಾಧಿಸಿದ ವಿಜಯದಂತೆ ಈ ಪತನಗಳು ಕಾಣುತ್ತವೆ. ಮನಸ್ಸು ನಚ್ಚಗಾಗುತ್ತದೆ. ಆದರೆ ಈ ನಚ್ಚು, ನಿಸರ್ಗದೊಳಗೆ ಮಧ್ಯಪ್ರವೇಶ ಮಾಡದೆ ಮಾನವ ಸಮಾಜ ಬದುಕುವುದು ಸಾಧ್ಯವಿದೆಯೇ; ಕಾಡೊಳಗೆ ಮಾನವ ಮಧ್ಯಪ್ರವೇಶವನ್ನೇ ಒಂದು ಕೇಡಾಗಿ ನೋಡುವ ಪರಿಸರವಾದಿ ವ್ಯಸನವಾಗುವ ಅತಿಗೆ ಮುಟ್ಟಬಹುದೇ ಎಂಬ ಪ್ರಶ್ನೆಗಳನ್ನೂ ಹುಟ್ಟಿಸುತ್ತದೆ.

ಶರಾವತಿ ಕಾಡೊಳಗಿನ ಕೋಟೆ, ಮೆಣಸಿನ ದಾಸ್ತಾನಿನ ಕೊಠಡಿಗಳು, ಕುದುರೆಯ ದಾರಿ, ಸಾಂಪ್ರದಾಯಿಕ ಹಳ್ಳಿಗಳು, ತೋಟದ ನಡುವೆ ಹೆಂಚಿನಮನೆ, ಹಣ್ಣಾದ ಭತ್ತದ ಗದ್ದೆಕೋಗು, ಬಟ್ಟೆ ಒಣಹಾಕಿದಂತೆ ಬಿದ್ದಿರುವ ಕುಯಿಲಾದ ಭತ್ತದ ಅರಿ, ಸೈನಿಕರನ್ನು ಕವಾಯತಿಗೆ ನಿಲ್ಲಿಸಿದಂತಿರುವ ಅಡಕೆಗಿಡ, ಪ್ರಾಚೀನ ಗುಡಿ–ಬಸದಿಗಳನ್ನು ಕಾಣುವಾಗ, ಇದು ನಿಸರ್ಗದೊಳಗೆ ಮನುಷ್ಯರು ಮಾಡಿದ ಅತಿಕ್ರಮಪ್ರವೇಶ ಅನಿಸುವುದಿಲ್ಲ. ಆದರೆ ಶರಾವತಿ ಕಾಡಿನಂಚಿನಲ್ಲಿ, ಮರವುರುಳಿಸಿ ನೆಲ ಸಮತಟ್ಟಲೆಂದು ಬಂದು ಧಡಬಡಲ್ ಮಾಡುತ್ತಿದ್ದ ಜೆಸಿಪಿಗಳ ಶೂರ್ಪನಖದ ಗುರುತುಗಳನ್ನು ಕಂಡಾಗ, ಇದು ದುರಾಸೆಯಿಂದ ಮಾಡುತ್ತಿರುವ ಕ್ರೂರ ಪ್ರವೇಶವೆಂದು ಮನಸ್ಸು ಖಿನ್ನವಾಗುತ್ತದೆ. ಇವೇ ಹಳದಿ ಯಂತ್ರಗಳಲ್ಲವೇ ಕೊಡಗಿನ ಭೂಕುಸಿತಕ್ಕೆ ನಾಂದಿ ಹಾಡಿದ್ದು? ನಾಗೊಳ್ಳಿಯಲ್ಲಿ ಸರಳಾ ನದಿಯುದ್ದಕ್ಕೂ ಅದರ ಇಳಿಜಾರು ದಡದಲ್ಲಿ ಕಾಡನ್ನು ಬೇಕಾಬಿಟ್ಟಿ ಕಡಿದು ಬಯಲುಗೊಳಿಸಿ ಅಡಕೆ ಗಿಡ ನೆಡಲಾಗಿತ್ತು. ಹೊಸತಾಗಿ ಎಬ್ಬಿಸುತ್ತಿರುವ ರಬ್ಬರು–ಅಡಕೆಯ ತೋಟಗಳು, ನಿಧಾನವಾಗಿ ಶರಾವತಿ ಕಣಿವೆಗೆ ಮುತ್ತಿಗೆ ಹಾಕುವಂತೆ ಸರ್ವದಿಕ್ಕುಗಳಿಂದಲೂ ನುಗ್ಗುತ್ತಿರುವಂತೆ ತೋರಿತು. ಈ ತೋಟ ಹೋಂಸ್ಟೇ ಮತ್ತು ಧಾರ್ಮಿಕ ಸ್ಥಳಗಳಿಗೆ ರಸ್ತೆ ಸೌಲಭ್ಯ ಕಲ್ಪಿಸುವ ಮೂಲಕ ಕಾಡಿನ ಏಕಾಂತ ಕದಡುವ ಜನಸಂದಣಿಯನ್ನು ಬರಮಾಡಿಕೊಳ್ಳಲು ಕೊಳ್ಳವು ಸಜ್ಜಾಗುತ್ತಿದೆಯೇ? ಒಂದು ಕಾಲಕ್ಕೆ ದಟ್ಟ ಕಾಡನ್ನು ಕಡಿದು ಮಾಡಿದ ಅಡಕೆ ತೋಟ–ಗದ್ದೆಗಳು, ನಿಸರ್ಗವನ್ನು ತನ್ನಿಚ್ಛೆಯಂತೆ ಪಳಗಿಸಿದ ಮಾನವ ಸಾಹಸದ ಪ್ರತೀಕವಾಗಿದ್ದವು. 'ಬೆಟ್ಟದ ಜೀವ' ಕಾದಂಬರಿಯ ಗೋಪಾಲಯ್ಯ ಹೀರೊ ಆಗಿದ್ದು ಹೀಗೆ. ಆಗ ಏಕತಾನದ ಕಾಡೊಳಗೆ ಉಸಿರ್ದಾಣದಂತೆ ಸಿಗುತ್ತಿದ್ದ ಮಾನವ ಪ್ರವೇಶವು ಪ್ರಿಯವಾಗಿತ್ತು. ಆದರೀಗ ಬರುತ್ತಿರುವವರು ಗೋಪಾಲಯ್ಯನವರಲ್ಲ. ಕಾಡನ್ನೇ ಸುಟ್ಟು ಅಲ್ಲಿನ ಜೀವಿಗಳನ್ನು ತಬ್ಬಲಿಯಾಗಿಸಿ, ಹಣ ಮಾಡುವ ಖಾಂಡವ ದಹನಕಾರರು.

ಪ್ರಶ್ನೆಯೆಂದರೆ, ನಿಸರ್ಗದಿಂದ ದೂರವಾಗಿ ಬದುಕುವ ನಾಗರಿಕರಾದ ನಾವು ನಮ್ಮ ಖಾಲಿತನ ತುಂಬಿಕೊಳ್ಳಲು ಮತ್ತೆಮತ್ತೆ ಕಾಡಿಗೆ, ಕಡಲಿಗೆ, ನದಿಗೆ, ಮರುಭೂಮಿಗೆ ಹೋಗುವ ನಾವು, ಅಲ್ಲಿಂದ ಏನನ್ನು ಪಡೆದುಕೊಂಡೆವು ಎನ್ನುವುದು. ಶರಾವತಿ ಕಣಿವೆಯಲ್ಲಿ ಕಳೆದುಹೋಗಲೆಂದೇ ಹೋದವರು ನಾವು. ನಮ್ಮ ಚಾರಣಪಥದಲ್ಲಿ ಎದುರಾದ ಇಳಿಕೆ–ಏರಿಕೆಗಳು, ಆಧುನಿಕ ಲಖದ ಸರಳರೇಖೆ ಮತ್ತು ಸರಳೀಕರಣಗಳನ್ನು ನಿರಾಕರಿಸುವ ಪಶ್ಚಿಮಘಟ್ಟದ ವಿಶಿಷ್ಟ ಲಯದ ಪ್ರತೀಕಗಳಂತಿದ್ದವು. ಬೆಟ್ಟ, ಕಾಡು, ಕಣಿವೆ, ಹೊಳೆ, ಗಿರಿಶಿಖರಗಳಿಂದ ಕಾಣುವ ಕಡಲು ಇದರ ವಿವಿಧ ಕೊಂಡಿಗಳಾಗಿದ್ದವು. ತೇಜಸ್ವಿಯವರು ಅಭಯಾರಣ್ಯದ ಬಗ್ಗೆ ವ್ಯಾಖ್ಯಾನಿಸುತ್ತ 'ಪಶ್ಚಿಮಘಟ್ಟದ ಮರಗಳು, ಅವಕ್ಕೆ ಹಬ್ಬಿದ ಬಳ್ಳಿಗಳು, ಅವುಗಳಲ್ಲಿ ಬಿಡುವ ಹೂವು, ಅವಕ್ಕೆ ಆಕರ್ಷಿತವಾಗುವ ಕೀಟಗಳು, ಅವನ್ನು ತಿನ್ನಬರುವ ಹಕ್ಕಿಗಳ ಸರಪಳಿ ಸಂಬಂಧವುಳ್ಳ ಕಾನನಗಳನ್ನು, ಒಮ್ಮೆ ನಾಶಮಾಡಿದರೆ ಮತ್ತೆ ಸೃಷ್ಟಿಸಲು ಸಾಧ್ಯವಿಲ್ಲ' ಎಂದು ಹೇಳುವುದುಂಟು. ಈ ಸತ್ಯವನ್ನು ಶರಾವತಿ ಚಾರಣ ಮನವರಿಕೆಗೊಳಿಸುತ್ತದೆ; ಮಾತ್ರವಲ್ಲ, 'ಮಲೆಗಳಲ್ಲಿ ಮದುಮಗಳ'ಲ್ಲಿ ಬರುವ 'ಇಲ್ಲಿ ಯಾರೂ ಮುಖ್ಯರಲ್ಲ' ಹಾಗೂ 'ಕುಸುಮಬಾಲೆ'ಯಲ್ಲಿರುವ 'ಸಂಬಂಜವೆಂಬುದು ದೊಡ್ಡದು ಕನಾ' ಎಂಬ ದಾರ್ಶನಿಕ ಹೇಳಿಕೆಗಳನ್ನು ಅರ್ಥಮಾಡಿಸುತ್ತದೆ. ಪರಸ್ಪರ ಧರ್ಮ, ದೇಶ, ಜಾತಿಗಳಲ್ಲಿ ವಿಭಜಿತವಾಗಿರುವ ನಾವು, ಪ್ರಕೃತಿಯ ಒಳಗಿನ ವಿವಿಧ ಘಟಕಗಳ ನಡುವಿನ ಕೂಡು 'ಸಂಬಂಜ'ವನ್ನು ಮುದ್ದಾಮಾಗಿ ಅರಿಯಬೇಕಿದೆ. ಆಗ ಪ್ರಕೃತಿಗೂ ನಮಗೂ ಯಾವ ಬಗೆಯ 'ಸಂಬಂಜ' ಎಂಬುದೂ ತಿಳಿಯುತ್ತದೆ. ಇಂತಹ ಅರಿವು–ಆಲೋಚನೆ, ಉಲ್ಲಾಸ–ವಿಸ್ಮಯಗಳಿಗೆ ಕಾರಣವಾಗಬಲ್ಲ ಶರಾವತಿ ಕೊಳ್ಳವು, ನಾಡು ಜತನದಿಂದ ಕಾದುಕೊಳ್ಳಬೇಕಾದ ನೈಸರ್ಗಿಕ ಸೌಭಾಗ್ಯವಾಗಿದೆ.

ಪ್ರತಿಕ್ರಿಯಿಸಿ: **feedback@sudha.co.in**